ಕರ್ನಾಟಕ ಮಾಹಿತಿ ಆಯೋಗದಲ್ಲಿ ದಿ: 14-07-2016 ರಂದು ಮಾನ್ಯ ರಾಜ್ಯ ಮುಖ್ಯ ಮಾಹಿತಿ ಆಯುಕ್ತರು, ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳು.

ಸಭೆಯಲ್ಲಿ ಹಾಜರಿದ್ದವರು:-

1. ಶ್ರೀ ಡಿ.ಎನ್. ನರಸಿಂಹರಾಜು, ರಾಜ್ಯ ಮುಖ್ಯ ಮಾಹಿತಿ ಆಯುಕ್ತರು.
2. ಶ್ರೀ ಎಲ್. ಕೃಷ್ಣಮೂರ್ತಿ, ರಾಜ್ಯ ಮಾಹಿತಿ ಆಯುಕ್ತರು.
3. ಶ್ರೀ ಶಂಕರ್ ಆರ್ ಪಾಟೀಲ್, ರಾಜ್ಯ ಮಾಹಿತಿ ಆಯುಕ್ತರು.
4. ಶ್ರೀ ಎನ್.ಪಿ. ರಮೇಶ್, ರಾಜ್ಯ ಮಾಹಿತಿ ಆಯುಕ್ತರು.
5. ಶ್ರೀ ಕೆ.ಎಂ. ಚಂದ್ರೇಗೌಡ, ರಾಜ್ಯ ಮಾಹಿತಿ ಆಯುಕ್ತರು.
6. ಶ್ರೀ ಪಿ.ಜೆ. ವಿಜಯ ಕುಮಾರ್, ರಾಜ್ಯ ಮಾಹಿತಿ ಆಯುಕ್ತರು.
7. ಡಾ॥ ಸುಚೇತನ ಸ್ವರೂಪ್, ರಾಜ್ಯ ಮಾಹಿತಿ ಆಯುಕ್ತರು.
8. ಶ್ರೀ ಜಿ.ಸಿ. ವೃಷಭೇಂದ್ರ ಮೂರ್ತಿ, ಕಾರ್ಯದರ್ಶಿ.
9. ಶ್ರೀಮತಿ ಶ್ರೀಲತಾ ಕೋಟೇಮಠ್, ಅಧೀನ ಕಾರ್ಯದರ್ಶಿ.

ಈ ಸಭೆಯಲ್ಲಿ ಚರ್ಚಿಸಲಾದ ವಿಷಯಗಳು:-

1) ಅನುಪಾಲನಾ ವರದಿ.

ಕರ್ನಾಟಕ ಮಾಹಿತಿ ಆಯೋಗದಲ್ಲಿ ದಿನಾಂಕ: 30-06-2016ರಂದು ನಡೆದ ಸಭೆಯ ಅನುಪಾಲನಾ ವರದಿಯನ್ನು ಕಾರ್ಯದರ್ಶಿಯವರು ಸಭೆಯಲ್ಲಿ ಒಪ್ಪಿಸಿದರು.

2) ಆಯೋಗದಲ್ಲಿ ನಡೆಸುವ ವಿಡಿಯೋ ಕಾನ್ಫರೆನ್ಸ್ ಕುರಿತು ರಚಿಸಬೇಕಾದ ನಿಯಮಗಳ ಬಗ್ಗೆ.

ಈ ಬಗ್ಗೆ ಯಾವುದೇ ನಿಯಮ ಇಲ್ಲದಿರುವುದರಿಂದ ಹೊಸದಾಗಿ ನಿಯಮಗಳನ್ನು ಮಾಡಬೇಕಾಗಿರುವುದಿರಂದ ಈಗಾಗಲೇ ಕಳೆದ ಆಯೋಗದ ಸಭೆಯಲ್ಲಿ ಚರ್ಚಿಸಿದಂತೆ ಒಬ್ಬ ನಿವೃತ್ತ ಸೆಷನ್ಸ್ ನ್ಯಾಯಾಧೀಶರನ್ನು ಕರ್ನಾಟಕ ಮಾಹಿತಿ ಹಕ್ಕು ನಿಯಮಗಳು-2005ರ ತಿದ್ದುಪಡಿಗಾಗಿ ಕರಡನ್ನು ತಯಾರಿಸಲು ನೇಮಿಸುತ್ತಿರುವ ಹಿನ್ನಲೆಯಲ್ಲಿ ಈ ಬಗ್ಗೆಯೂ ಸಹ ನಿಯಮಗಳನ್ನು ರಚಿಸಲು ಅವರಿಗೆ ತಿಳಿಸಬಹುದು ಎಂದು ಸಭೆ ತೀರ್ಮಾನಿಸಿತು.

ಕ್ರಮ: ಕಾರ್ಯದರ್ಶಿ

3) ಪ್ರಕರಣ ಸಂಖ್ಯೆ: ಕೆಐಸಿ/598/ಸಿಐಎಂ/2008ರ ಬಗ್ಗೆ ಚರ್ಚೆ.

ಈ ಪ್ರಕರಣವು 08 ವರ್ಷಗಳ ಹಿಂದಿನ ಪ್ರಕರಣವಾಗಿದ್ದು, ಈಗಾಗಲೇ ಒಂದು ನ್ಯಾಯಾಲಯದಲ್ಲಿ ಕೇಳಿರುವ ಮಾಹಿತಿಯನ್ನೆ ಮತ್ತೊಂದು ನ್ಯಾಯಾಲಯದಲ್ಲಿಯೂ ಕೇಳಿ ತದನಂತರ ಪ್ರಕರಣ ಮುಕ್ತಾಯಗೊಂಡಿದ್ದು, ಇದನ್ನು ಪುನರ್ ವಿಚಾರಣೆಗಾಗಿ ಅರ್ಜಿದಾರರು ಕೇಳಿರುವ ಹಿನ್ನಲೆಯಲ್ಲಿ, ಈಗಾಗಲೇ ಮುಕ್ತಾಯಗೊಂಡಿರುವ ಪ್ರಕರಣಗಳನ್ನು ಮತ್ತೊಮ್ಮೆ ವಿಚಾರಣೆ ಮಾಡಲು ಬೇರೆ ನ್ಯಾಯಾಲಯ ಸಭಾಂಗಣದಲ್ಲಿ ತೆಗೆದುಕೊಳ್ಳಲು ಕಾಯ್ದೆಯಲ್ಲಿ ಅವಕಾಶವಿರುವುದಿಲ್ಲವೆಂದು ಸಭೆ ಗಮನಿಸಿ ಅದರಂತೆಯೇ ಹಿಂಬರಹವನ್ನು ನೀಡುವಂತೆ ಕಾರ್ಯದರ್ಶಿಯವರಿಗೆ ಸೂಚಿಸಿತು.

ಕ್ರಮ: ಕಾರ್ಯದರ್ಶಿ

4) ಪ್ರಕರಣ ಸಂಖ್ಯೆ: ಕೆಐಸಿ/1426/ಎಪಿಎಲ್/2015 ಇದರಲ್ಲಿ ನೀಡಿರುವ ಆದೇಶದ ಕುರಿತು.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಈಗಾಗಲೇ ಕಳೆದ ಆಯೋಗದ ಸಭೆಯಲ್ಲಿ ಚರ್ಚಿಸಿದಂತೆ ಒಬ್ಬ ನಿವೃತ್ತ ಸೆಷನ್ಸ್ ನ್ಯಾಯಾಧೀಶರನ್ನು ಕರ್ನಾಟಕ ಮಾಹಿತಿ ಹಕ್ಕು ಕಾಯ್ದೆ-2005ರ ತಿದ್ದುಪಡಿಗಾಗಿ ಕರಡನ್ನು ತಯಾರಿಸಲು ನೇಮಿಸುತ್ತಿರುವ ಹಿನ್ನಲೆಯಲ್ಲಿ ಮೇಲ್ಕಂಡ ಪ್ರಕರಣದ ಆದೇಶದಲ್ಲಿ ತಿಳಿಸಿರುವಂತೆ ಕೆಲವೊಂದು ಮಾರ್ಪಾಡುಗಳೊಂದಿಗೆ ನಿಯಮಗಳನ್ನು ರಚಿಸಲು ಅವರಿಗೆ ತಿಳಿಸಬಹುದು ಎಂದು ಸಭೆ ತೀರ್ಮಾನಿಸಿತು.

ಕ್ರಮ: ಕಾರ್ಯದರ್ಶಿ

5) ದಿನಾಂಕ: 05-09-2015ರಂದು ನಡೆದ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ವಿಷಯವನ್ನು ಕುರಿತು.

ಎಲ್ಲಾ ಆಯುಕ್ತರುಗಳಿಗೆ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ಇವರಿಂದ ಬಂದಿರುವ ಪತ್ರದ ಪ್ರತಿಯನ್ನು ನೀಡುತ್ತಾ, ವಿಚಾರಣಾ ಸಮಯದಲ್ಲಿ ಇದನ್ನು ಗಮನಕ್ಕೆ ತೆಗೆದುಕೊಳ್ಳಲು ಮಾನ್ಯ ಕಾರ್ಯದರ್ಶಿಯವರು ಸಭೆಯ ಗಮನಕ್ಕೆ ತಂದರು.

ಕ್ರಮ: ಕಾರ್ಯದರ್ಶಿ

6) ಅಧ್ಯಕ್ಷರ ಅನುಮತಿ ಮೇರೆಗೆ ಇತರೆ ವಿಷಯಗಳು.

1) ಕರ್ನಾಟಕ ಮಾಹಿತಿ ಆಯೋಗಕ್ಕೆ ಹೆಚ್ಚುವರಿ ಹುದ್ದೆಗಳನ್ನು ಪಡೆದುಕೊಳ್ಳಲು ಸರ್ಕಾರದ ಮಂಜೂರಾತಿಗಾಗಿ ಪ್ರಸ್ತಾವನೆ ಕಳುಹಿಸುವ ಬಗ್ಗೆ.

ಕರ್ನಾಟಕ ಮಾಹಿತಿ ಆಯೋಗದಲ್ಲಿ ಸದ್ಯಕ್ಕೆ ಸುಮಾರು 34,000 ಪ್ರಕರಣಗಳು ಬಾಕಿ ಇರುತ್ತದೆ. ಪ್ರತಿದಿನ 07 ನ್ಯಾಯಾಲಯದ ಸಭಾಂಗಣದಲ್ಲಿ ಸರಿಸುಮಾರು ದಿನಕ್ಕೆ 200ಕ್ಕೂ ಹೆಚ್ಚು ಪ್ರಕರಣಗಳನ್ನು ವಿಚಾರಣೆಗೆ ತೆಗೆದುಕೊಳ್ಳುತ್ತಿದ್ದು, ಈ ವಿಚಾರಣಾ ಆದೇಶಗಳನ್ನು ಅರ್ಜಿದಾರರು ಮತ್ತು ಪ್ರತಿವಾದಿಗಳಿಗೆ ಮುದ್ರಿತವಾಗಿ ರವಾನೆಯಾಗುವುದು ರೂಢಿಯಲ್ಲಿದೆ. ವಿಚಾರಣಾ ದಿನಾಂಕಗಳನ್ನು ಸಹ ಹತ್ತಿರದ ದಿನಾಂಕಗಳನ್ನು ನೀಡಿ, ಅವುಗಳನ್ನು ಇತ್ಯರ್ಥಪಡಿಸಲು ಎಲ್ಲಾ ಆಯುಕ್ತರುಗಳು ಕ್ರಮ ಕೈಗೊಳ್ಳುತ್ತಿರುವ ಹಿನ್ನಲೆಯಲ್ಲಿ ಸಿಬ್ಬಂದಿಗಳ ಅವಶ್ಯಕತೆ ಹೆಚ್ಚಾಗಿರುತ್ತದೆ. ಈಗ ಕರ್ತವ್ಯ ನಿರ್ವಹಿಸುತ್ತಿರುವ ತೀರ್ಪು ಬರಹಗಾರರು 200 ಪ್ರಕರಣಗಳ ಉಕ್ತಲೇಖನವನ್ನು ಪಡೆದು ಅವುಗಳ ಆದೇಶವನ್ನು ಮಾನ್ಯ ಆಯುಕ್ತರಿಂದ ದೃಡೀಕರಿಸಿ ಸಲ್ಲಿಸಲು ಕನಿಷ್ಠ 10 ದಿನಗಳ ಅವಶ್ಯಕತೆ ಇರುತ್ತದೆ. ಹಾಗಾಗಿ, ಪ್ರತಿ ತೀರ್ಪು ಬರಹಗಾರರ ಬಳಿ ಕನಿಷ್ಠ 50-60 ಕಡತಗಳು ಬಾಕಿ ಉಳಿಯುತ್ತಿದ್ದು, ಇವುಗಳ ಆದೇಶವನ್ನು ಈಗಿರುವ ಸಿಬ್ಬಂದಿಯ ಸಂಖ್ಯೆಯಲ್ಲಿ ರವಾನಿಸಲು ಕಷ್ಟ ಸಾಧ್ಯವಾಗಿರುತ್ತದೆ. ಈ ಹಿನ್ನಲೆಯಲ್ಲಿ ಪ್ರತಿ ನ್ಯಾಯಾಲಯ ಸಭಾಂಗಣಕ್ಕೆ ಈಗಿರುವ ಇಬ್ಬರು ತೀರ್ಪು ಬರಹಗಾರರೊಂದಿಗೆ ಮತ್ತೊಬ್ಬ ತೀರ್ಪು ಬರಹಗಾರರನ್ನು ನೀಡಲು ಎಲ್ಲಾ ಆಯುಕ್ತರು ಮಾನ್ಯ ರಾಜ್ಯ ಮುಖ್ಯ ಮಾಹಿತಿ ಆಯುಕ್ತರನ್ನು ಕೋರಿದ ಹಿನ್ನಲೆಯಲ್ಲಿ ಪ್ರತಿ ನ್ಯಾಯಾಲಯ ಸಭಾಂಗಣಕ್ಕೆ ತಲಾ ಒಂದರಂತೆ ಹೆಚ್ಚುವರಿ ತೀರ್ಪು ಬರಹಗಾರರನ್ನು ನೇಮಕ ಮಾಡಲು ಹೆಚ್ಚುವರಿಯಾಗಿ 07 ತೀರ್ಪು ಬರಹಗಾರರನ್ನು, ಆಯೋಗದ ಇತರೆ ಕಾರ್ಯಚಟುವಟಿಕೆಗಳಿಗೆ ಅವಶ್ಯವಿರುವ 08 ದತ್ತ ನಮೂದಕರನ್ನು ಹಾಗೂ 10 ದಲಾಯತ್ ಹುದ್ದೆಗಳನ್ನು ಮಂಜೂರು ಮಾಡಿಕೊಡುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಲು ಸಭೆ ಕಾರ್ಯದರ್ಶಿಯವರಿಗೆ ಸೂಚಿಸಿತು.

ಕ್ರಮ: ಕಾರ್ಯದರ್ಶಿ

21/7/2016

ರಾಜ್ಯ ಮುಖ್ಯ ಮಾಹಿತಿ ಆಯುಕ್ತರು